ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ ,

ಕುಂದಾಪುರ

ಸಿ.ಸಿ. ನಂಬ್ರಃ 2025/2022

ಚಾಸಾಃ 2 ಪ್ರಾಸಾಃ2

ದಿನಾಂಕಃ 30.11.2024

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಮಂಜುನಾಥ ಕೆ |
| ತಂದೆಯ ಹೆಸರು | : | ಬಸವ ನಾಯ್ಕ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಮುಖ್ಯ ಪೇದೆ |
| ವಾಸ ಸ್ಥಳ | : | ಶಂಕರನಾರಾಯಣ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಭಾ. ದಂ. ಪ್ರ, ಸಂ, ಕಲಂ 299 ಸಿ ಆರ್ ಪಿ ಸಿ ರಡಿಯಲ್ಲಿ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ**

ನಾನು 2015 ರಿಂದ 2022ರವರೆಗೆ ಕುಂದಾಪುರದ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 01-07-2020 ರಂದು ಹೆಮ್ಮಾಡಿ ಗ್ರಾಮದ ಸಂತೋಷ ನಗರದ ನಿವಾಸಿಯಾದ ಮಂಜು ಇಲಾಯಿದ್ ವಶದಲ್ಲಿರುವ ಫಾತಿಮಾ ಜೋಹಾರ್ ರವರ 2 ವರ್ಷ 3 ತಿಂಗಳ ಮಗುವನ್ನು ಫಾತಿಮಾ ಜೋಹಾರ್ ರವರಿಗೆ ಕೊಡಿಸಲು ಉಡುಪಿಯ 2ನೇ ಹೆಚ್ಚುವರಿ ನ್ಯಾಯಿಕ ದ.ನ್ಯಾಯಾಲಯವು ಹೊರಡಿಸಿದ್ದ ಆದೇಶವನ್ನು 1ನೇ ಆರೋಪಿ ಇಲಾಯಿದ್‌ಗೆ ಜಾರಿ ಮಾಡಲು ಮಗುವನ್ನು ಫಾತಿಮಾರವರಿಗೆ ಹಸ್ತಾಂತರಿಸಲು

ನ್ಯಾಯಾಲಯದ ಆದೇಶವನ್ನು ಜಾರಿ ಮಾಡಿಸಲು ಹೆಚ್ ಸಿ 141 ಅವಿನಾಷ್ -ಚಾಸಾ-1ರವರಿಗೆ ಪಿ ಎಸ್ ಐ ರವರು ಸೂಚಿಸಿದ್ದರು. ಅದರಂತೆ ದಿಃ 01-07-2020 ರಂದು ಪೊಲೀಸ್ ಠಾಣೆಗೆ ಬಂದಿದ್ದ ಫಾತಿಮಾ-ಚಾಸಾ-4 ರವರೊಂದಿಗೆ ನ್ಯಾಯಾಲಯದ ಆದೇಶ ಜಾರಿ ಮಾಡುವಂತೆ ಚಾಸಾ-1ರವರಿಗೆ ತಿಳಿಸಿದ್ದು ಪಿ ಎಸ್ ಐ ರವರು ಸೂಚಿಸಿರುತ್ತಾರೆ. ಅದರಂತೆ ನಾನು ಚಾಸಾ-3 ಹಾಗೂ 4ರವರೊಂದಿಗೆ ಇಲಾಖಾ ಜೀಪಿನಲ್ಲಿ ಕುಳ್ಳಿರಿಸಿಕೊಂಡು ಸಮವಸ್ತ್ರದಲ್ಲಿ ಠಾಣೆಯಿಂದ ಹೊರಟು ಹೆಮ್ಮಾಡಿ ಗ್ರಾಮದ ಸಂತೋಷ ನಗರದಲ್ಲಿರುವ ಇಲಾಯಿದ್ ಮನೆ ಬಳಿ 12 ಗಂಟೆಗೆ ತಲುಪಿರುತ್ತೇವೆ. ಆಗ ಮನೆಯಲ್ಲಿ 1ನೇ ಆರೋಪಿ ಇಲಾಯಿದ್ ಆತನ ತಮ್ಮ ತಕ್ರೀಮ್, ತಾಯಿ ಖೈರುನ್ನೀಸಾ, ತಂಗಿ ಫರ್ವಿನ್ ಇದ್ದು ನಾವು ಜೀಪನ್ನು ಮನೆಯ ಸಮೀಪ ನಿಲ್ಲಿಸಿ ಜೀಪಿನಲ್ಲಿದ್ದ ಚಾಸಾ-1ರವರು ಇಲಾಯಿದ್ ಮನೆಯ ಬಳಿ ಹೋದಾಗ ನಾನು, ಚಾಸಾ-3 ಮತ್ತು 4ರವರು ಜೀಪಿನಲ್ಲಿ ಕುಳಿತಿದ್ದು ಚಾಸಾ-1ರವರು 1ನೇ ಆರೋಪಿ ಇಲಾಯಿದ್ ಗೆ ನ್ಯಾಯಾಲಯದ ಆದೇಶ ತೋರಿಸಿ ಮಗುವನ್ನು ಫಾತಿಮಾರವರಿಗೆ ಹಸ್ತಾಂತರಿಸಲು ಹೇಳಿ ಆದೇಶದ ಪ್ರತಿಯನ್ನು ಸಹಿ ಮಾಡಲು ತಿಳಿಸಿದಾಗ 1ನೇ ಆರೋಪಿ ಇಲಾಯಿದ್ ಆದೇಶದ ಪ್ರತಿಯನ್ನು ಕಸಿದುಕೊಂಡು ಮಗುವನ್ನು ನೀಡುವುದಿಲ್ಲ ಎಂದು ಹೇಳಿರುತ್ತಾನೆ. ಅಷ್ಟರಲ್ಲಿ ಆತನೊಂದಿಗೆ 3 ಮತ್ತು 4ನೇ ಆರೋಪಿತರು ಬೊಬ್ಬೆ ಹಾಕಿಕೊಂಡು ಮನೆಯ ಒಳಗೆ ಹೋಗಿ 3ನೇ ಆರೋಪಿ ಮಚ್ಚನ್ನು ಮತ್ತು 4ನೇ ಆರೋಪಿ ಕತ್ತಿಯನ್ನು ಮನೆಯ ಒಳಗಿನಿಂದ ತಂದು 1ನೇ ಆರೋಪಿ ಮತ್ತು 2ನೇ ಆರೋಪಿಗೆ ನೀಡಿರುತ್ತಾರೆ.

1ನೇ ಆರೋಪಿ ಕೈಯಲ್ಲಿ ಮಚ್ಚನ್ನು , 2ನೇ ಆರೋಪಿ ಕತ್ತಿಯನ್ನು ಹಿಡಿದು ಕೊಂಡು ಸಮವಸ್ತ್ರದಲ್ಲಿ ಇದ್ದ ಚಾಸಾ-1ರವರನ್ನು ಅಡ್ಡಗಟ್ಟಿ ಕೈಯಿಂದ ದೂಡಿ ಮಗುವನ್ನು ನೀಡುವುದಿಲ್ಲ ನೀವು ಇಲ್ಲಿ ಯಾಕೆ ಬಂದಿರುತ್ತೀರಿ ನಿಮ್ಮನ್ನು ಕೊಂದು ಸಾಯಿಸುತ್ತೇನೆ ಬಿಡುವುದಿಲ್ಲ ಎಂದು ಹೇಳುತ್ತಾ ಏಕಾಏಕಿ 1ನೇ ಆರೋಪಿ ಆತನ ಕೈಯಲ್ಲಿ ಇದ್ದ ಮಚ್ಚಿನಿಂದ ಮತ್ತು 2ನೇ ಆರೋಪಿ ಆತನ ಕೈಯಲ್ಲಿ ಇದ್ದ ಕತ್ತಿಯಿಂದ ಚಾಸಾ-1ರವರನ್ನು ಕೊಲ್ಲುವ ಉದ್ದೇಶದಿಂದ ಚಾಸಾ-1ರವರ ಕಡೆಗೆ ಬೀಸಿರುತ್ತಾರೆ. ಚಾಸಾ-1ರವರು ಆಗ ತಪ್ಪಿ ಸಿಕೊಂಡಿರುತ್ತಾರೆ.

ಕೂಡಲೇ ಜೀಪಿನಲ್ಲಿದ್ದ ನಾನು, ಚಾಸಾ-3ರವರು ಹೊರಗೆ ಹೋಗಿ ಚಾಸಾ-1ರವರ ಬಳಿ ಹೋದಾಗ ನಮ್ಮ ನ್ನು ನೋಡಿ ಆರೋಪಿತರು ಅಲ್ಲಿಂದ ಓಡಿ ಹೋಗಿರುತ್ತಾರೆ. 1ನೇ ಮತ್ತು 2ನೇ ಆರೋಪಿತರು 3 ಮತ್ತು 4ನೇ ಆರೋಪಿತರೊಂದಿಗೆ ಸೇರಿಕೊಂಡು ಮಗುವನ್ನು ಫಾತಿಮಾ-ಚಾಸಾ-4ರವರಿಗೆ ಹಸ್ತಾಂತರಿಸಲು ನಿರಾಕರಿಸಿ ನ್ಯಾಯಾಲಯದ ಆದೇಶದಂತೆ ಮಗುವನ್ನು ಚಾಸಾ-4ರವರ ಭದ್ರಿಕೆಗೆ ಹಸ್ತಾಂತರಿಸಿರುತ್ತಾರೆ. ನ್ಯಾಯಾಲಯದ ಆದೇಶ ಜಾರಿ ಮಾಡಲು ಹೋದ ಚಾಸಾ-1ರವರ ಮೇಲೆ ಆತನನ್ನು ತಡೆದು ನಿಲ್ಲಿಸಿಕೊಲ್ಲುವ ಉದ್ದೇಶದಿಂದ ಮಚ್ಚು ಮತ್ತು ಕತ್ತಿಯನ್ನು ಬೀಸಿ ಚಾಸಾ-1ರವರಿಗೆ ಹಲ್ಲೆ ನಡೆಸಲು ಮುಂದಾಗಿ ಅವರ ಸರಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ. ಈ ಕುರಿತು ಚಾಸಾ-1ರವರು ದೂರು ನೀಡಿದ್ದು ಪ್ರಕರಣ ದಾಖಲಾಗಿರುತ್ತದೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

ಆರೋಪಿಗಳು ತಲೆಮರೆಸಿಕೊಂಡಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು

**<u>ಮರು ವಿಚಾರಣೆಃ</u>** <u>ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**